ಈ ಹೊತ್ತು ನಮ್ಮನ್ನು ನಾವೇ ಕೇಳಿಕೊಳ್ಳಬೇಕಾದ ಪ್ರಶ್ನೆಗಳು ಅನೇಕ ಇವೆ. ಅವುಗಳಿಗೆ ಉತ್ತರ ನಾನಾ ಬಗೆಯವು ಇರಬಹುದು. ವ್ಯವಹಾರ ಜಾಣ್ಮೆ ಅಂಥ ಉತ್ತರಗಳಿಂದ ಪ್ರಶ್ನೆಗಳನ್ನೇ ಮರೆಮಾಡಬಹುದು! ಆದರೆ ಅಂತಃಕರಣದ ಪ್ರಶ್ನೆಗೆ ಉತ್ತರ ಕೊಡುವುದು ಸಾಧ್ಯವಾಗದು.

## ಕನ್ನಡ ತುಣುಕುಗಳು

ಅನೇಕ ಆಡಳಿತಗಳಲ್ಲಿ ಕನ್ನಡದ ನೆಲ ಹರಿದು ಹಂಚಿ ಹೋಗಿತ್ತು. ಹೊಸ ಪ್ರಾಂತ ರಚನೆಯಿಂದ ಹೆಚ್ಚು ಕಡಮೆ ಬಹುಭಾಗ ಒಂದು ಆಡಳಿತಕ್ಕೆ ಒಳಗಾಯಿತು. ಕೆಲವು ಪ್ರದೇಶಗಳು, ಕನ್ನಡ ಪ್ರಧಾನವಾದ ಪ್ರದೇಶಗಳು ಇತರ ರಾಜ್ಯಗಳಲ್ಲಿ ಉಳಿದು ಹೋದವು. ಅವುಗಳಲ್ಲಿ ಸ್ವಲ್ಪ ಮಟ್ಟಿನ ದನಿ ಉಳಿದಿರುವುದು ಕೇರಳಕ್ಕೆ ಸೇರಿಹೋದ ಕಾಸರಗೋಡಿನಲ್ಲಿ ಮಾತ್ರ. ಮಿಕ್ಕ ಪ್ರದೇಶಗಳಲ್ಲಿ ಆಗೊಮ್ಮೆ ಈಗೊಮ್ಮೆ ಕನ್ನಡನಾಡಿಗೆ ಸೇರಬೇಕೆಂಬ ಅಪೇಕ್ಷೆ ಕಂಡುಬಂದರೂ ಜನರ ದನಿಯಲ್ಲಿ ಶಕ್ತಿ ಕಾಣುತ್ತಿಲ್ಲ. ಇಪ್ಪತ್ತೈದು ವರ್ಷ ಒಂದು ಪೀಳಿಗೆಯ ಅವಧಿ. ಈ ಪೀಳಿಗೆಯ ಜನ ತಮ್ಮ ಭವಿಷ್ಯವನ್ನು ರೂಪಿಸಿಕೊಳ್ಳಬೇಕಾದುದರಿಂದ ತಮ್ಮ ರಾಜ್ಯದೊಡನೆ ಸಹಜವಾಗಿ ಹೊಂದಿಕೊಳ್ಳುವುದು ಅನಿವಾರ್ಯ. ಒಮ್ಮೆ ಹೊಂದಾಣಿಕೆ ಸ್ಥಾಪಿತವಾದರೆ ಹಳೆಯದೆಲ್ಲ ಕನಸಾಗುತ್ತದೆ. ಮಹಾರಾಷ್ಟ್ರ, ತಮಿಳುನಾಡು, ಆಂಧ್ರಪ್ರದೇಶಗಳಲ್ಲಿ ಉಳಿದಿರುವ ಕನ್ನಡ ತುಣುಕುಗಳಲ್ಲಿ ಈಗ ಉಂಟಾಗುತ್ತಿರುವುದು ಈ ಸ್ಥಿತಿ. ಕರ್ನಾಟಕದ ಅವಿಭಾಜ್ಯ ಭಾಗವಾದ ಬೆಳಗಾವಿ ಅತ್ಯಂತ ವಾದಗ್ರಸ್ತವಾದ ಪ್ರದೇಶವಾಗಿದೆ. ಇದು ಕೇವಲ ಕೀಟಲೆ ರಾಜಕಾರಣದ ಫಲ. ಇಡೀ ರಾಷ್ಟ್ರದಲ್ಲಿ ಗೊಂದಲಮಯವಾಗಿರುವ ಗಡಿವಿವಾದ ಬೆಳಗಾವಿ ಒಂದೇ. ಕನ್ನಡಿಗರ ದೌರ್ಬಲ್ಯ, ಮರಾಟಿಗರ ದಬ್ಬಾಳಿಕೆಗಳಿಂದ ಅದಿನ್ನೂ ತುಂಬ ಜೀವಂತವಾಗಿ ಉಳಿದಿದೆ.

ಯಾವ ರೀತಿಯಲ್ಲಿ ಗಡಿಯನ್ನು ಪುನರ್ವಿಂಗಡಿಸಿದರೂ, ಭಾಷಿಕ ಅಲ್ಪಸಂಖ್ಯಾತರು ಇದ್ದೇ ಇರುತ್ತಾರೆ. ತಮ್ಮ ವಿಶೇಷ ಸವಲತ್ತುಗಳನ್ನು ಉಳಿಸಿಕೊಂಡು ಬಹುಸಂಖ್ಯಾತರೊಡನೆ ಬೆರೆತು ಬಾಳುವುದೇ ಅಲ್ಪಸಂಖ್ಯಾತರಿಗಿರುವ ದಾರಿ. ಬಹುಭಾಷೆಗಳ ಈ ದೇಶದಲ್ಲಿ ಇದು ಒಂದೇ ದಾರಿ. ಗಡಿಗಳ ಚರ್ಚೆ ಶಾಶ್ವತವಾಗಿ ನಿಲ್ಲುವುದು ಇಂದಿನ ರಾಷ್ಟ್ರೀಯ ಅಗತ್ಯಗಳಲ್ಲಿ ತುಂಬ ಮಹತ್ವವಾದದ್ದು. ಈಗಾಗಲೆ ನಿರ್ಧಾರವಾಗಿರುವ ರಾಜ್ಯ ರಚನೆಯನ್ನು ಮತ್ತೆ ಮತ್ತೆ ಪ್ರಶ್ನಿಸುವುದು ಉಚಿತವಲ್ಲ. ಸಮಗ್ರರಾಷ್ಟ್ರದ ದೃಷ್ಟಿಯಿಂದ, ಸಹಬಾಳ್ವೆಯ ದೃಷ್ಟಿಯಿಂದ ಇದು ತೀರ ಅಗತ್ಯ. ಕೇಂದ್ರ ಸರ್ಕಾರ ಈ ಕುರಿತು ಅಂತಿಮ ಘೋಷಣೆ ಹೊರಡಿಸಿ ಗಡಿಯನ್ನು ಕುರಿತ ಚರ್ಚೆಗಳನ್ನು ನಿಲ್ಲಿಸಬೇಕು. ಇದರಿಂದ ಕನ್ನಡ ನಾಡಿನ ಕೆಲವು ಭಾಗಗಳು ಹೊರಗೇ ಉಳಿದು ಹೋಗುತ್ತವೆ. ಕಾಸರಗೋಡಿನಂಥ ಜೀವಂತ ಪ್ರಶ್ನೆಯೂ ಕೊನೆಯಾಗಬೇಕಾಗುತ್ತದೆ. ನನ್ನ ಸೂಚನೆ ಅನೇಕರ ಕೋಪ, ಟೀಕೆಗಳಿಗೆ ಕಾರಣವಾಗುತ್ತದೆಂಬುದನ್ನು ನಾನು ಬಲ್ಲೆ. ಕನ್ನಡವನ್ನು ಕನ್ನಡನಾಡನ್ನು ಪ್ರೀತಿಸುವವರಲ್ಲಿ ನಾನು ಯಾರಿಗೂ ಎರಡನೆಯವನಲ್ಲ. ಆದರೂ ಗಡಿ ಪ್ರಶ್ನೆಗಳು ಇಲ್ಲಿಗೆ ಶಾಶ್ವತವಾಗಿ ನಿಲ್ಲಬೇಕೆಂಬುದು ನನ್ನ ಅಪೇಕ್ಷೆ. ಸಮಸ್ಯೆಗಳು ಶಾಶ್ವತವಾಗಿ ಉಳಿಯಬಾರದು. ಕೊಟ್ಟು ತೆಗೆದುಕೊಳ್ಳುವ ಮನೋಭಾವ ರಾಷ್ಟ್ರೀಯ ಜೀವನದಲ್ಲಿ ಅಗತ್ಯ; ನಾಡಿನ ಸಮೃದ್ಧಿಯ ದೃಷ್ಟಿಯಿಂದಲೂ ಸೂಕ್ತ. ಅಲ್ಪ ಸಂಖ್ಯಾತರಾಗಿ ಹೊರಗೆ ಉಳಿಯುವ ಕನ್ನಡ ಜನರಿಗೆ ಅವರ ಸಾಂಸ್ಕೃತಿಕ ಸಾಹಿತ್ಯಿಕ ಒಲವುಗಳನ್ನು ಕಾಪಾಡಿಕೊಳ್ಳಲು ಬೇಕಾದ ವ್ಯವಸ್ಥೆ ಮಾಡುವುದೂ ಕರ್ನಾಟಕದ ಒಂದು ಜವಾಬ್ದಾರಿ. ಆ ದಿಕ್ಕಿನಲ್ಲಿ ನಾವು ಈಗ ಯೋಚಿಸಬೇಕು.